ನಿಸ್ಸೋದನೆ

# ಪಠ್ಯಪುಸ್ತಕ ವಿಳಂಬ ಎನ್ನುವ ಹಳೆಯ ಚಾಳಿ ಸರ್ಕಾರ ತೋರಬೇಕಿದೆ ಬದ್ಧತೆ-ಇಚ್ಛಾಶಕ್ತಿ

**ಕೊರೊನಾ ಕಾರಣದಿಂದಾಗಿ ಕುಂಠಿತಗೊಂಡಿದ್ದ ಮಕ್ಕಳ ಕಲಿಕೆಯನ್ನು ಪುನಶ್ಚೇತನಗೊಳಿಸಲು ಸರ್ಕಾರ ಮುಂದಾಗಿದೆ. ಮೇ 16ರಿಂದ ಶಾಲೆಗಳು ಆರಂಭವಾಗಲಿವೆ. ಆದರೆ, ಮಕ್ಕಳ ಕೈಗೆ ಪಠ್ಯಪುಸ್ತಕ ಸಕಾಲದಲ್ಲಿ ದೊರೆಯುವುದು ಅನುಮಾನ. ಮಕ್ಕಳ ಕೈಗೆ ಶೈಕ್ಷಣಿಕ ವರ್ಷದ ಆರಂಭದಲ್ಲಿ ಪುಸ್ತಕ ಕೊಡುವುದು ಸಾಧ್ಯವಾಗದೆ ಹೋದರೆ, ಕಲಿಕೆಯ ಪುನಶ್ಚೇತನ ಎನ್ನುವುದು ಬಾಯಿಮಾತಿನ ಬದ್ಧತೆಯಾಗುತ್ತದಷ್ಟೇ.**




ಕೊರೊನಾ ಸಾಂಕ್ರಾಮಿಕವು ಶಾಲಾ ಮಕ್ಕಳ ಕಲಿಕೆಗೆ ದೊಡ್ಡ ರೀತಿಯಲ್ಲಿ ಪೆಟ್ಟು ಕೊಟ್ಟಿದೆ. ಸತತ ಎರಡು ವರ್ಷಗಳ ಈ ಹೊಡೆತದಿಂದ ಶಿಕ್ಷಣ ಕ್ಷೇತ್ರವನ್ನು ಹೊರತಂದು ಮಕ್ಕಳ ಕಲಿಕೆಯನ್ನು ಪುನಃ ಹಳಿಗೆ ತರುವುದು ಸವಾಲಿನ ಕೆಲಸ. ಕಲಿಕೆಯ ಕೊರತೆಯನ್ನು ನೀಗಿಸುವ ಸಲುವಾಗಿ ಈ ಶೈಕ್ಷಣಿಕ ವರ್ಷದ ಪೂರ್ಣಾವಧಿಗೆ 'ಕಲಿಕಾ ಚೇತರಿಕೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದು ಮಕ್ಕಳಿಗೆ ಅಗತ್ಯವಾಗಿ ಬೇಕಾಗಿದ್ದ ಪೂರಕ ಕ್ರಮ.

ಮುಂಬರುವ ಶೈಕ್ಷಣಿಕ ಸಾಲಿನ ವೇಳಾಪಟ್ಟಿಯೂ ಈಗ ಹೊರಬಿದ್ದಿದೆ. 2022–23ನೇ ಸಾಲಿನ ಶೈಕ್ಷಣಿಕ ವರ್ಷ ಮೇ 16ರಿಂದ ಆರಂಭವಾಗಲಿದೆ. ರಾಜ್ಯದಲ್ಲಿನ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಈ ವೇಳಾಪಟ್ಟಿ ಅನ್ವಯ ಆಗಲಿದೆ. ಎಲ್ಲ ಬಗೆಯ ರಜೆಗಳನ್ನು ಹೊರತುಪಡಿಸಿದರೆ ಈ ಶೈಕ್ಷಣಿಕ ವರ್ಷದಲ್ಲಿ ಒಟ್ಟು 228 ದಿನಗಳಲ್ಲಿ ತರಗತಿಗಳು ನಡೆಯಲಿವೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ತಿಳಿಸಿದೆ. ಪ್ರತಿದಿನವೂ ಅಮೂಲ್ಯ ಎಂದು ಭಾವಿಸಿ, ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಾದ ವಿಶೇಷ ಸಂದರ್ಭವಿದು.

ಆದರೆ, ಶೈಕ್ಷಣಿಕ ವೇಳಾಪಟ್ಟಿ ಪ್ರಕಟಗೊಂಡ ಸಂದರ್ಭದಲ್ಲಿಯೇ ಪಠ್ಯಪುಸ್ತಕಗಳಿಗೆ ಸಂಬಂಧಿಸಿದ ಒಂದು ಅಪಸ್ವರ ಹೊರಟಿದೆ. ಮುದ್ರಣ ಕಾಗದದ ತೀವ್ರ ಅಭಾವದಿಂದಾಗಿ ಶಾಲಾ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪಠ್ಯಪುಸ್ತಕ ಸಿಗುವ ಸಾಧ್ಯತೆ ಬಗೆಗೆ ಅನುಮಾನಗಳು ವ್ಯಕ್ತವಾಗಿವೆ. ಮುದ್ರಣ ಕಾಗದದ ಕೊರತೆಯ ಜೊತೆ ಬೆಲೆ ಏರಿಕೆಯೂ ಸೇರಿಕೊಂಡು ಪಠ್ಯಪುಸ್ತಕಗಳ ಮುದ್ರಣಕ್ಕೆ ತೊಡಕಾಗಿ ಪರಿಣಮಿಸಿದೆ ಎಂದು ವರದಿಯಾಗಿದೆ.

ರಷ್ಯಾ–ಉಕ್ರೇನ್ ಸಂಘರ್ಷ ಮತ್ತು ಚೀನಾದಲ್ಲಿ ಕೋವಿಡ್ ಉಲ್ಬಣಿಸಿರುವ ಕಾರಣದಿಂದ ಜಾಗತಿಕ ಮಟ್ಟದಲ್ಲಿ ಮುದ್ರಣ ಕಾಗದದ ಅಭಾವ ಸೃಷ್ಟಿಯಾಗಿದೆ. ಭಾರತದಲ್ಲಿನ ಮುದ್ರಣ ಕಾಗದ ಉತ್ಪಾದನಾ ಕಂಪನಿಗಳು ಇದರ ಲಾಭ ಪಡೆಯುವ ಉದ್ದೇಶದಿಂದ ಹೆಚ್ಚಿನ ಬೆಲೆಗೆ ವಿದೇಶಗಳಿಗೆ ಕಾಗದವನ್ನು ರಫ್ತು ಮಾಡುತ್ತಿವೆ. ಇದರಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಕಾಗದದ ವಿಪರೀತ ಕೊರತೆ ಉಂಟಾಗಿದೆ. ಪುಸ್ತಕ ಮುದ್ರಣಕ್ಕೆ ಅಗತ್ಯ ಪ್ರಮಾಣದಲ್ಲಿ ಕಾಗದ ಪೂರೈಕೆ ಆಗುತ್ತಿಲ್ಲ ಎಂದು ಪಠ್ಯಪುಸ್ತಕ ಮುದ್ರಕರು ಅಳಲು ತೋಡಿಕೊಂಡಿದ್ದಾರೆ.

ಮುದ್ರಣ ಕಾಗದದ ಕೊರತೆ ಉಂಟಾಗಿರುವುದು, ಬೆಲೆ ಹೆಚ್ಚಳ ಆಗಿರುವುದು, ಇವೆಲ್ಲವೂ ನಿಜ. ಆದರೆ, ಮಕ್ಕಳ ಭವಿಷ್ಯವನ್ನು ಎದುರಿಗೆ ಇರಿಸಿಕೊಂಡಾಗ ಈ ಸಮಸ್ಯೆಗಳು ಬಗೆಹರಿಸಲಾರದಂತಹವು ಏನೂ ಅಲ್ಲ. ಪುಸ್ತಕಗಳ ಮುದ್ರಣಕ್ಕೆ ಅಗತ್ಯವಿರುವಷ್ಟು ಕಾಗದ ಪೂರೈಸಬೇಕು ಎಂದು ಪ್ರಕಾಶಕರು ಬೇಡಿಕೆ ಇಟ್ಟಿದ್ದಾರೆ. ಸರ್ಕಾರವೊಂದಕ್ಕೆ ಇದು ಪೂರೈಸಲಾರದಷ್ಟು ದೊಡ್ಡ ಸಮಸ್ಯೆಯಲ್ಲ. ಪಠ್ಯಪುಸ್ತಕಗಳನ್ನು ಮೇ 15ಕ್ಕೆ ಮುದ್ರಿಸಿ ಹಸ್ತಾಂತರಿಸಬೇಕು ಎಂದು ಶಿಕ್ಷಣ ಇಲಾಖೆ ಗಡುವು ನೀಡಿದೆ. ಈ ಗಡುವನ್ನು 15 ದಿನಗಳ ಮಟ್ಟಿಗೆ ವಿಸ್ತರಿಸಬೇಕು ಎಂಬ ಆಗ್ರಹವೂ ಇದೆಯಾದರೂ ಗಡುವು ವಿಸ್ತರಿಸುವುದು ಈ ಸಂದರ್ಭದಲ್ಲಿ ಸಮಂಜಸ ಆಗಲಾರದು. ಏಕೆಂದರೆ, ಮೇ 16ರಿಂದ ತರಗತಿಗಳು ಶುರುವಾಗಲಿವೆ. ಪಾಠ ಕೇಳುವ ಸಂದರ್ಭದಲ್ಲಿ ಮಗುವಿನ ಕೈಯಲ್ಲಿ ಪುಸ್ತಕ ಇರುವುದು ಗುಣಾತ್ಮಕ ಕಲಿಕೆಗೆ ಪೂರಕ. ಪುಸ್ತಕವೇ ಇಲ್ಲದಿದ್ದರೆ ಕೇಳಿದ ಪಾಠವನ್ನು ಮಕ್ಕಳು ಮರೆಯುವ ಸಾಧ್ಯತೆಯೇ ಹೆಚ್ಚು.

'ಈ ಹಿಂದೆ ಸಮಸ್ಯೆಯಾದಾಗ ಸರ್ಕಾರ ಮಧ್ಯಪ್ರವೇಶ ಮಾಡಿ ಮುದ್ರಕರಿಗೆ ಮುಂಗಡ ಹಣ ಕೊಟ್ಟು ಪಠ್ಯಪುಸ್ತಕ ಮುದ್ರಣಕ್ಕೆ ಅವಕಾಶ ನೀಡಿತ್ತು. ಈ ವರ್ಷ ಕಾರ್ಯಾದೇಶ ಕೊಟ್ಟಿದ್ದಾರೆ. ಕೆಲಸವೂ ಶುರುವಾಗಿದೆ. ಆದರೆ ಕಳೆದ ವರ್ಷದ ಬಿಲ್ ಪಾವತಿ ಆಗಿಲ್ಲ' ಎಂದು ಪಠ್ಯಪುಸ್ತಕ ಮುದ್ರಕರ ಸಂಘದ ಅಧ್ಯಕ್ಷ ಸತ್ಯಕುಮಾರ್ ಹೇಳಿದ್ದಾರೆ. ಅವರ ಹೇಳಿಕೆಯನ್ನು ಗಮನಿಸಿದಾಗ ಕಾಗದದ ಕೊರತೆ, ಬೆಲೆ ಏರಿಕೆಯ ಜೊತೆಗೆ ಬೇರೆ ಇನ್ನೂ ಏನೇನೋ ತೊಡಕುಗಳು ಇವೆ ಎಂದು ಭಾಸವಾಗುತ್ತದೆ. ಇಂತಹ ಅಡೆತಡೆಗಳನ್ನು ನಿವಾರಿಸಿ, ಪಠ್ಯಪುಸ್ತಕಗಳನ್ನು ಸಕಾಲಕ್ಕೆ ಮಕ್ಕಳ ಕೈಗೆ ತಲುಪಿಸಲು ಸರ್ಕಾರ ಮುಂದಾಗಬೇಕು.

ಇತ್ತೀಚಿನ ವರ್ಷಗಳಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ಎಂಬುದೇ ದೊಡ್ಡ ವಿವಾದವಾಗಿ ಪರಿಣಮಿಸುತ್ತಿದೆ. ಅದು, ಅಕಡೆಮಿಕ್ ಚೌಕಟ್ಟು ಮೀರಿ ಕೆಲವೊಮ್ಮೆ ಬೀದಿಜಗಳದ ಸ್ವರೂಪ ಪಡೆದದ್ದೂ ಉಂಟು. ವಿಳಂಬ ಸಾಧ್ಯತೆಗೆ ಇದು ಕೂಡ ಕಾರಣ ಇದ್ದಿರಬಹುದು ಎಂಬ ಮಾತಿದೆ. ಅಂತೆಯೇ ಪಠ್ಯಪುಸ್ತಕ ಪೂರೈಕೆಗೆ ಅಂಟಿರುವ ವಿಳಂಬ ರೋಗಕ್ಕೆ ಕಾಲದ ಹಂಗಿಲ್ಲ. ಪ್ರತಿವರ್ಷದ ಬೇನೆ. ಪಕ್ಕಾ ಯೋಜನೆ ರೂಪಿಸಿ, ಕಾಲಮಿತಿಯೊಳಗೆ ಅದನ್ನು ಅನುಷ್ಠಾನಗೊಳಿಸುವ ಬದ್ಧತೆ ಮತ್ತು ಇಚ್ಛಾಶಕ್ತಿ ಇಲ್ಲದಿರುವುದೇ ಇದಕ್ಕೆ ಕಾರಣ.

■ ಎನ್. ಉದಯಕುಮಾರ್